ದೂರದಿಂದ ಲೀಡ್ ಕೊಟ್ಟು ಹಣವನ್ನು ತೆಗೆದುಕೊಂಡಿದ್ದಾರೆ. ಇದು ಕಾಂಟ್ರಾಕ್ಟ್‌ರ್‌ಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ಈ ವ್ಯವಹಾರವಾಗಿದೆ. ಆದ್ದರಿಂದ ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ಆಗಬೇಕು. ಆದರೆ ಯಾರೋ ಒಬ್ಬರಿಗೆ ದುಡ್ಡನ್ನು ತಿನ್ನಿಸುವುದರಿಂದ ಏನೂ ಉಪಯೋಗವಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ನಾನು ಮಧ್ಯೆ ಪ್ರವೇಶಿಸಲು ಇಷ್ಟಪಡುವುದಿಲ್ಲ. ಆದರೆ ಒಂದು ಸಲಹೆಯನ್ನು ಮಾಡಬಯಸುತ್ತೇನೆ. ಅಲ್ಲಿ ಹಣ ದುರುಪಯೋಗ, ಭ್ರಷ್ಟಾಚಾರ ನಡೆದಿದೆ ಎಂಬುದನ್ನು ತಾವು ಕೂಡ ಒಪ್ಪಿಕೊಳ್ಳುತ್ತಿದ್ದೀರಿ. ಮಾನ್ಯ ಸದಸ್ಯರು ಹೇಳಿದಂತೆ ತಾವು ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿಗೆ ಒಪ್ಪಿಕೊಳ್ಳಿ. ಇದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಎಸ್.ಎಂ.ಕೃಷ್ಣ : ಇಂಥ ಪ್ರಶ್ನೆಗಳು ಬಂದಾಗಲೆಲ್ಲಾ ನಾವು ಸದಾ ಸಿದ್ಧ. ಇದರ ಬಗ್ಗೆ ಸಿ.ಒ.ಡಿ.ಎನ್‌ಕ್ವೈರಿಯನ್ನು ಮಾಡಿಸುತ್ತೇವೆ.

12.50 ಪಿಎಂ

ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಪುತ್ಥಳಿಯನ್ನು ವಿಧಾನ ಸೌಧದ ಮುಂದೆ ಸ್ಥಾಪಿಸುವ ಬಗ್ಗೆ ಹಾಗೂ ಅವರ ಜನ್ಮ ದಿನಾಚರಣೆಯನ್ನು ಆಚರಿಸುವ ಬಗ್ಗೆ

* ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ದೇಶದ ಒಬ್ಬ ಹಿರಿಯ ಮುಖಂಡರಾದ ಹಾಗೂ ಕರ್ನಾಟಕ ಏಕೀಕರಣದ ಬಗ್ಗೆ ಶ್ರಮಿಸಿದಂಥ ಹಾಗೂ ಮಾಜಿ ಮುಖ್ಯ ಮಂತ್ರಿಗಳಾದ ಮಾನ್ಯ ಎಸ್. ನಿಜಲಿಂಗಪ್ಪನವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ, ಮತ್ತು ಅವರ ಜನ್ಮ ದಿನಾಚರಣೆಯನ್ನೂ ಕೂಡ ಸರ್ಕಾರವೇ ಆಚರಿಸಬೇಕೆಂಬ ಬಗ್ಗೆ ನಾನೂ, ಮಾನ್ಯ ಪಿ.ಜಿ.ಆರ್.ಸಿಂಧ್ಯ ಮಾನ್ಯ ಡಿ.ಬಿ.ಚಂದ್ರೇಗೌಡರು, ಯಡಿಯೂರಪ್ಪನವರು, ಈಶ್ವರಪ್ಪನವರೂ ಹಾಗೂ ಮಾನ್ಯ ದೇಶಪಾಂಡೆಯವರೂ, ಬೈರೇಗೌಡರು ಎಲ್ಲರೂ ಸೇರಿ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ (ಮಾನ್ಯ ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಹಿರಿಯ ರಾಷ್ಟ್ರ ನಾಯಕರಾದ ಮಾನ್ಯ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಬಗ್ಗೆ ನಮಗೆ ಅಪಾರವಾದ ಅಭಿಮಾನ, ಪ್ರೇಮ ನಮ್ಮೆಲ್ಲರಲ್ಲೂ ಇದೆ. ಅಷ್ಟೇ ಅಲ್ಲ, ಇದರ ಬಗ್ಗೆ ನಮ್ಮ ಪಕ್ಷದವರದ್ದೂ ಕೂಡ ಒತ್ತಾಯವಿದೆ. ಅವರ ಬಗ್ಗೆ ಒಂದು ಪ್ರತಿಮೆಯನ್ನು ಅನಾವರಣ ಮಾಡಬೇಕು, ಇವತ್ತು ಅವರು 94ನೇ ಜನ್ಮ ದಿನೋತ್ಸವವನ್ನು ಕಾಣುತ್ತಿದ್ದಾರೆ

ಎಂಬ ವಿಚಾರವನ್ನು ಹೇಳುತ್ತಿದ್ದಾರೆ. ನಾವು ಮಾನ್ಯ ನಿಜಲಿಂಗಪ್ಪನವರ ಜೊತೆಯಲ್ಲಿ ಮಾತನಾಡಿ ಅವರ ಒಪ್ಪಿಗೆಯನ್ನು ಪಡೆಯದೇ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಯಾವರೀತಿಯಲ್ಲಿ ಅವರ ಜನ್ಮದಿನೋತ್ಸವವನ್ನು ಆಚರಿಸಬೇಕು, ಹಾಗೂ ಅವರ ಪ್ರತಿಮೆಯನ್ನು ಹಾಕುವುದಕ್ಕೆ ಅವರ ಒಪ್ಪಿಗೆ ಇದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ ಈ ದಿಸೆಯಲ್ಲಿ ಅವರ ಜೊತೆ ಮಾತಾನಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್‌ನಾಗರಾಜ್ : ಅವರ ಒಪ್ಪಿಗೆಯನ್ನು ತೆಗೆದುಕೊಳ್ಳುವ ಪ್ರಶ್ನೆ ಬೇರೆ. ತಾವು ಈಗಾಗಲೇ ಮಾನ್ಯ ದೇವರಾಜ ಅರಸ್‌ರವರ ಪ್ರತಿಮೆಯನ್ನು ಸ್ಥಾಪಿಸಿರುವುದರಿಂದ ನಮಗೆಲ್ಲಾ ಬಹಳ ಗೌರವ ಬಂದಿದೆ. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಭಾವಚಿತ್ರ ನಮ್ಮ ಮಾಜಿ ಸಭಾಧ್ಯಕ್ಷರ ಶ್ರಮದಿಂದ ಈ ಸದನಕ್ಕೆ ಬಂತು. ಇದು ಬಹಳ ಸಂತೋಷ. ನಮ್ಮ ಕರ್ನಾಟಕ ಏಕೀಕರಣದ ಇತಿಹಾಸದಲ್ಲಿ ಉಳಿಯತಕ್ಕದ್ದು 3 ಜನರ ಹೆಸರು. ಅದು ಎಂದರೆ ಮಾನ್ಯ ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯನವರು ಹಾಗೂ ಮಾನ್ಯ ದೇವರಾಜ ಅರಸ್‌ವರ ಹೆಸರಗಳು ಮಾನ್ಯ ಕೆಂಗಲ್ ಹನುಮಂತಯ್ಯನವರು ನಮ್ಮ ಕರ್ನಾಟಕ ಏಕೀಕರಣದ ವಿಚಾರದಲ್ಲಿ ತಮ್ಮ ಅಧಿಕಾರವನ್ನೇ ಕಳೆದುಕೊಂಡರು. ತಮ್ಮ ಅಧಿಕಾರ ಹೋದರೂ ಪರವಾಗಿಲ್ಲ ಈ ರಾಜ್ಯ ಒಂದಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಮತ್ತು ಪರಮ ದೃಷ್ಟಿಯನ್ನು ಮಾನ್ಯ ಕೆಂಗಲ್ ಹನುಮಂತಯ್ಯನವರು ಇಟ್ಟುಕೊಂಡಿದ್ದರು. ಮಾನ್ಯ ನಿಜಲಿಂಗಪ್ಪನವರು ನಮ್ಮ ಕರ್ನಾಟಕ ಏಕೀಕರಣಕ್ಕಾಗಿಯೇ ದುಡಿದಿರುವುದಲ್ಲದೆ ಅಪಾರವಾದ ಸೇವೆಯನ್ನು ರಾಜ್ಯದ ಜನತೆಗೆ ಮಾಡಿದ್ದಾರೆ. ಶ್ರೀಮಾನ್ ದೇವರಾಜ್ ಅರಸರು ಕರ್ನಾಟಕ ಎಂದು ನಾಮಕರಣ ಮಾಡುವುದರಲ್ಲಿ ಒಳ್ಳೆಯ ಪಾತ್ರವನ್ನು ವಹಿಸಿ ಈ ಸದನದಲ್ಲಿ ನವೆಂಬರ್ 5ನೇ ತಾರೀಖಿನಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ನಾಮಕರಣ ಮಾಡಿದರು. ನಾನು ಶ್ರೀಮಾನ್ ದೇವರಾಜ ಅರಸರಿಗೆ ಮೊದಲನೆಯದಾಗಿ ಈ ಸದನವಲ್ಲೇ ಗೌರವವನ್ನು ಸೂಚಿಸಿ ಸದನದ ಮೂಲಕ ನಾನು ಪ್ರಪ್ರಥಮವಾಗಿ ಕರ್ನಾಟಕ ಎಂದು ಇಲ್ಲಿ ಘೋಷಣೆಯಾದ ನಂತರ, ದೇವರಾಜು ಅರಸು ಅವರಿಗೆ ಇಲ್ಲೇ ಹಾರ ಹಾಕಿ, ನಮ್ಮ ನಾಡಿನ ಜನತೆಯ ಪರವಾಗಿ ಗೌರವವನ್ನು ಸಲ್ಲಿಸಿದೆ. ಹಿಂದೆ ಈ ರಾಜ್ಯದ ರಾಜ್ಯಪಾಲರಾಗಿದ್ದಂಥ ಶ್ರೀಮಾನ್ ವಿ.ವಿ. ಗಿರಿಯವರು ಶ್ರೀಮಾನ್ ನಿಜಲಿಂಗಪ್ಪನವರ ಪ್ರತಿಮೆಯನ್ನು ನಾವು ಮಾಡುತ್ತೇವೆಂಬ ಮಾತನ್ನು ಆ ಕಾಲದಲ್ಲಿ ಹೇಳಿದ್ದರು. ಇದು ಎಲ್ಲರೂ ಒಪ್ಪತಕ್ಕದ್ದು. ನಿಜಲಿಂಗಪ್ಪನವರನ್ನು ವೈಯಕ್ತಿಕವಾಗಿ ಕೇಳುವುದಕ್ಕೆ ಹೋದರೆ, ನಿಮ್ಮ ಪ್ರತಿಮೆ ಹಾಕುತ್ತೇವೆ, ನೀವು ಒಪ್ಪುತ್ತೀರಾ ಎಂದರೆ ಈ ಪ್ರಶ್ನೆ ಬರುವುದಿಲ್ಲ. ಅವರು ಒಪ್ಪುತ್ತಾರೋ ಬಿಡುತ್ತಾರೋ ಆ ಪ್ರಶ್ನೆ, ಅವರನ್ನು ಕೇಳಿತಕ್ಕದ್ದು ಒಂದು ವಾದ. ಸರ್ಕಾರ ನಿರ್ಧಾರ ಕೈಗೊಳ್ಳಿ. ಪಾಪ ನೀವು ಒಂದು ಮಹತ್ತರವಾದ ಕಾರ್ಯ ಮಾಡಿದ್ದೀರಿ. ನಿಮ್ಮ ಬಗ್ಗೆ ನನಗೆ ಬಹಳ ಮೆಚ್ಚುಗೆ ಇದೆ. ಇಂಥ ಮಹತ್ತರವಾದ ನಾಡಿಗೋಸ್ಕರ ದೊಡ್ಡ ತ್ಯಾಗ ಮಾಡಿದ ರಾಜ್ಯದ ಒಬ್ಬ

ಹಿರಿಯ ಮುಖಂಡರನ್ನು ನಾವು ಎಷ್ಟು ಗೌರವದಿಂದ ಕಾಣಬೇಕೋ ಈ ರೀತಿ ಕಾಣಬೇಕು ಎಂಬ ಅಭಿಪ್ರಾಯ ನನ್ನದು. ತಾವು ಎಲ್ಲಾ ಲೋಕಸಭೆಗೆ ಹೋದಾಗ ನೋಡಿದ್ದೇವೆ. ಅಲ್ಲಿಮಹಾರಾಷ್ಟ್ರದವರ ಪ್ರತಿಮೆಗಳಿವೆ. ಕೇರಳದವರ ಪ್ರತಿಮೆಗಳಿವೆ. ತಮಿಳುನಾಡಿನವರ ಪ್ರತಿಮೆಗಳಿವೆ. ಕಾಮರಾಜ್, ವೈ.ಬಿ.ಚವಾಣ್ ಅವರ ಪ್ರತಿಮೆ ಇದೆ. ನಮ್ಮವರದಿಲ್ಲ. ಹನುಮಂತಯ್ಯನವರು, ದೇವರಾಜ ಅರಸರು ಮತ್ತು ನಿಜಲಿಂಗಪ್ಪನವರು ನಿಜವಾಗಿಯೂ ಕರ್ನಾಟಕದ ಚರಿತ್ರೆಯಲ್ಲಿ ಉಳಿಯುವವರು. ಅದರಲ್ಲಿ ಎರಡು ಅಭಿಪ್ರಾಯ ಇಲ್ಲ. ಆದ್ದರಿಂದ ನಮ್ಮವರ ಭಾವಚಿತ್ರಗಳನ್ನೂ ಹಾಕಬೇಕೆಂಬ ಒತ್ತಡವನ್ನು ನಮ್ಮ ಸರ್ಕಾರ ತರಬೇಕು. ಈಗ ನಿಜಲಿಂಗಪ್ಪನವರ ಪ್ರತಿಮೆಯನ್ನು ಹಾಕುವ ಬಗ್ಗೆ ಅವರನ್ನು ಕೇಳುವುದು ಬಿಡುವುದು ಬೇರೆ. ಸಾಮಾನ್ಯವಾಗಿ ಅವರು ಇಂಥದ್ದಕ್ಕೆ ಒಪ್ಪುತ್ತಾರೋ ಬಿಡುತ್ತಾರೋ ಆ ಪ್ರಶ್ನೆ ಬೇರೆ. ಅವರು ಏನೇ ಹೇಳಿದರೂ ನಮ್ಮ ಕರ್ತವ್ಯ ಎಂಬ ದೃಷ್ಟಿಯಿಂದ ನಾವು ಮಾಡಲೇಬೇಕು. ಅವರು ಒಪ್ಪದೇ ಇದ್ದರೆ ನಾವು ಮಾಡಬಾರದು ಎಂಬ ಪ್ರಶ್ನೆ ಇಲ್ಲ. ಅವರದಿರಲಿ. ಅವರ 94ನೇ ವರ್ಷದ ಜನ್ಮದಿನಾಚರಣೆಯನ್ನು ಬಹಳ ವೈಭವವಾಗಿ ಕರ್ನಾಟಕ ರಾಜ್ಯದಲ್ಲಿ ಅದ್ದೂರಿಯಿಂದ ಮಾಡಬೇಕು. ಅದಕ್ಕೆ ವಿಶೇಷವಾಗಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಎಲ್ಲ ಪಕ್ಷದವರನ್ನೂ ಸೇರಿಸಿ ಒಂದು ವಿಶಿಷ್ಟವಾದ ರೀತಿಯಲ್ಲಿ ಅವರ ಜನ್ಮದಿನಾಚರಣೆಯನ್ನು ಆಚರಣೆ ಮಾಡಬೇಕು. ಅದೇ ಸಂದರ್ಭದಲ್ಲಿ ಪ್ರತಿಮೆ ಮಾಡತಕ್ಕ ನಿರ್ಧಾರವನ್ನು ಸರ್ಕಾರ ಕೈಗೊಂಡರೆ ಆಮೇಲೆ ನಾವೆಲ್ಲಾ ಹೋಗೋಣ; ಅವರ ಜೊತೆಯಲ್ಲಿ ಮಾತನಾಡೋಣ; ಎಲ್ಲರೂ ಸೇರೋಣ. ಅದು ಒಂದು. ಈಗ ಹನುಮಂತಯ್ಯನವರ ಪ್ರತಿಮೆ ಸಹ ಸರಿ ಇಲ್ಲ, ಬದಲಾವಣೆ ಮಾಡಬೇಕೆಂದು ನಾವು ಹಿಂದೆ ಹೇಳಿದ್ದೇವು. ನಾನು, ಜೆ.ಲಿಂಗಯ್ಯ ಅವರು ಮಾಜಿ ಮೇಯರ್ಸ್ ಅನಂತಕೃಷ್ಣ ಅವರು ಮತ್ತು ಕೆ.ಎಂ. ನಂಜಪ್ಪನವರು ಅಲ್ಲಿ ಸತ್ಯಾಗ್ರಹ ಮಾಡಿ ಬದಲಾವಣೆ ಮಾಡಬೇಕೆಂದು ಹೇಳಿದ್ದೆವು. ಆದರೆ ಪ್ರತಿಮೆ ಬದಲಾವಣೆ ಮಾಡುತ್ತೇವೆಂದು ಸರ್ಕಾರ ನಿರ್ಧಾರ ಮಾಡಿದೆ. ತಾವು ಮಾಡುತ್ತೀರಿ. ನನಗೆ ಅದು ಗೊತ್ತು. ಮತ್ತು ದೇವರಾಜು ಅರಸರ ಪ್ರತಿಮೆಯನ್ನು ತಾವು ಮಾಡಿದ್ದೀರಿ. ಅದನ್ನು ನೋಡಿದಾಗ ಸ್ವಲ್ಪ ಏನೋ ಒಂದು ರೀತಿ ನನಗನ್ನಿಸುತ್ತಿದೆ.

ಶ್ರೀ ಎಸ್.ಎಂ.ಕೃಷ್ಣ : ಮೊದಲು ನೋಡಿದಾಗ ಹಾಗೆ ಕಾಣುತ್ತದೆ. ಆಮೇಲೆ ನೋಡುತ್ತಾ ನೋಡುತ್ತಾ ಸರಿಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೋಡುತ್ತಾ ನೋಡುತ್ತಾ ಅವರದೇ ಅಂತ ಅಂದುಕೊಳ್ಳುತ್ತೇವೆ. ನನಗೆ ತಕ್ಷಣ ಅದು ಕೆ.ಆರ್.ಪೇಟೆಯ ಕೆಂಪೇಗೌಡರು ಕಂಡ ಹಾಗೆ ಕಾಣಿಸಿತು. ಅಷ್ಟು ವೈಭವ ಕಾಣಲಿಲ್ಲ. ಆದರೂ ಚಿಂತೆ ಇಲ್ಲ. ಅರಸರ ಪ್ರತಿಮೆಯನ್ನು ಹಾಕಿದ್ದಕ್ಕೋಸ್ಕರ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ನಿಜಲಿಂಗಪ್ಪನವರ ಪ್ರತಿಮೆ ಬಗ್ಗೆ ಅವರನ್ನು ಕೇಳುವುದು ಒಂದು ಕಡೆ. ಆದರೆ ಸರ್ಕಾರ ನಿರ್ಧಾರ ಕೈಗೊಂಡು ತನ್ನ ನಿರ್ಧಾರವನ್ನು ಪ್ರಕಟಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ವಾಟಾಳ್ ನಾಗರಾಜ್ ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದು ನಿಜವಾಗಿಯೂ ಒಂದು ಒಳ್ಳೆಯ ಸೂಚನೆ ಇದೆ. ಮಾನ್ಯ ಮುಖ್ಯಮಂತ್ರಿಯವರು ನಿಜಲಿಂಗಪ್ಪನವರನ್ನು ಕೇಳಬೇಕೆಂದು ಹೇಳಿದರು. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರಶ್ನೆ ಏನೆಂದರೆ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ನಿಜಲಿಂಗಪ್ಪನವರು ಯಾವಾಗಲೂ ಪ್ರತಿಮೆ ಹಾಕಿ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಬೇರೆ ಬೇರೆ ಮನೋಭಾವದ ಜನ ಇರುತ್ತಾರೆ . ಹಾಗಾಗಿ ತಾವು ಅಂದರೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಪ್ರತಿಮೆ ಹಾಕುತ್ತೇವೆ ಎಂದು. ವಿಧಾನಸೌಧದ ಮುಂದೆ ಅದು ಆಗಬೇಕು. ಎರಡನೆಯದಾಗಿ ಹುಟ್ಟುಹಬ್ಬದ ಬಗ್ಗೆ ಸಹ ಕಮಿಟಿಯನ್ನು ತಕ್ಷಣ ರಚನೆ ಮಾಡಬೇಕು. ಮತ್ತು ದೇವರಾಜ ಅರಸರ ಪ್ರತಿಮೆ ಬಗ್ಗೆ ಅವರು ಹೇಳಿದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಒಳ್ಳೆಯ ಕೆಲಸ ಆಗಿದೆ. ಆ ದೃಷ್ಟಿಯಿಂದ ಅಭಿನಂದಿಸುತ್ತೇನೆ. ಮತ್ತು ನಿಜಲಿಂಗಪ್ಪನವರ ಸ್ಟ್ಯಾಚೂ ಆಗಬೇಕು. ಹುಟ್ಟ ಹಬ್ಬ ಮಾಡುವುದಕ್ಕೆ ಸಮಿತಿ ಆಗಬೇಕೆಂದು ಸರ್ಕಾರದವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ನಿಜಲಿಂಗಪ್ಪನವರು ಕರ್ನಾಟಕ್ಕೆ ಮತ್ತು ರಾಷ್ಟ್ರಕ್ಕೆ ಮಾಡಿರತಕ್ಕ ಸೇವೆ ಅತ್ಯಂತ ಅಮೋಘ. ಇತಿಹಾಸದಲ್ಲಿ ಚಿನ್ನದ ಅಕ್ಷರಗಳಲ್ಲಿ ಬರೆಯತಕ್ಕುದ್ದು. ಮಾನ್ಯ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ನಿಲ್ಲಿಸುವಾಗ ಅರಸ್‌ರವರ ಪ್ರತಿಮೆಯನ್ನು ಸ್ಥಾಪಿಸುವಾಗ ನಮಗೆ ಯಾವ ಅಡಚಣೆಗಳೂ ಇರಲಿಲ್ಲ ಅವರ ಸಮ್ಮತಿಯನ್ನು ಪಡೆಯುವ ಅವಶ್ಯಕತೆ ಇರಲಿಲ್ಲ. ಆದರೆ ನಿಜಲಿಂಗಪ್ಪನವರು ಜೀವಂತವಾಗಿದ್ದಾರೆ. ಅವರ ಮನಸ್ಸಿಗೆ ನೋವಾಗತಕ್ಕ ಯಾವುದೇ ವಿಚಾರವನ್ನು ಮಾಡಬಾರದು. ಸರ್ಕಾರ ತಕ್ಷಣೆ ಒಪ್ಪಿದೆ, ಅವರ ಪ್ರತಿಮೆಯನ್ನು ಹಾಕುವುದಕ್ಕೆ ನಮ್ಮ ಸಂಪೂರ್ಣ ಒಪ್ಪಿಗೆಯಿದೆ. ನಮ್ಮ ಸಹ ಮತವಿದೆ.

ಶ್ರೀ ವಾಟಾಳ್ ನಾಗರಾಜ್ : ಸಂಜೀವರೆಡ್ಡಿಯವರ ಮತ್ತು ಕರುಣಾನಿಧಿಯವರ ಪ್ರತಿಮೆಯನ್ನು ಹಾಕಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಹಾಕಬಹುದು, ಅದಕ್ಕೇನೂ ಶಾಸ್ತ್ರ ಸೂತ್ರ ಪಂಚಾಗ ಏನೂ ಇಲ್ಲ.

Sri R.V. Deshapande : We have already taken a decision in the Cabinet. ಕ್ಯಾಬಿನೆಟ್‌ನಲ್ಲಿ ನಾವು ಸಹ ಡೀಸೀಷನ್ ಮಾಡಿದ್ದೇವೆ ಅವರ ಪ್ರತಿಮೆ ಆಗಬೇಕೆಂದು. ಅವರು ಬದುಕಿರುವಾಗ ಅವರ ಕನ್ಸೆಂಟ್ ತೆಗೆದುಕೊಳ್ಳಬೇಕಾಗುತ್ತದೆ. ನಿಜ, ನಿಜಲಿಂಗಪ್ಪನವರು ಒಪ್ಪಿಕೊಳ್ಳುತ್ತಾರೆಂದು ನನಗೇನೂ ಗ್ಯಾರಂಟಿಯಿಲ್ಲ. At the Government level you kindly announce that you are going to do it . ಎಲ್ಲರೂ ಸೇರಿ ಅವರನ್ನು ಪರ್ಸುಯೇಡ್ ಮಾಡೋಣ.

ಶ್ರೀ ಸಿ. ಭೈರೇಗೌಡ : ತಾತ್ವಿಕವಾಗಿ ತೀರ್ಮಾನ ತೆಗೆದುಕೊಂಡರೆ ಪತ್ರಿಕೆಗಳ ಮುಖಾಂತರ ಗೊತ್ತಾಗುತ್ತದೆ. ಅವರ ವಿರೋಧ ಬಂದರೆ ಅವರ ಹತ್ತಿರ ಹೋಗಿ ಮಾತನಾಡತಕ್ಕದ್ದು

ಮಾಡಬಹುದು. ವಿರೋಧವಿರಲಿಲ್ಲವೆಂದರೆ ಸಮ್ಮತಿ ಇದೆಯೆಂದು ಗೊತ್ತಾದರೆ ಆ ದಿಕ್ಕಿನಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಹೇಳುವಂತಹ ವಿಚಾರಗಳಿಗೆ ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮ ಸಹಮತ ಇದೆಯೆನ್ನುವ ಮಾತನ್ನು ಹೇಳಿದ್ದಾರೆ. ತಾತ್ವಿಕವಾಗಿ ಪ್ರತಿಮೆ ಮಾಡಲಿಕ್ಕೆ ನಾವು ಒಪ್ಪಿದ್ದೇವೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಸೂಚನೆ ಕೊಟ್ಟ ಪ್ರಕಾರ ಬೇಕಾದರೆ ನಮ್ಮ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ ಅದರಲ್ಲಿ ಅವರನ್ನು ಸೇರಿಸಿ ಯಾವ ರೀತಿಯಲ್ಲಿ ಅವರ 94ನೇ ಜನ್ಮದಿನೋತ್ಸವವನ್ನು ಆಚರಿಸಬೇಕು, ಪ್ರತಿಮೆ ಮಾಡುವುದು ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ಅದಕ್ಕೆ ನಾವು ಸಿದ್ಧರಿದ್ದೇವೆ. ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ಸಮಿತಿಯ ಸಭೆ ಸೇರಿಸಿ ಇದರ ವಿಚಾರವಾಗಿ ನಾವು ನಿರ್ಣಯವನ್ನು ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈಗ ಗೃಹಮಂತ್ರಿಗಳು ಸಭೆಗೆ ಬಂದಿದ್ದಾರೆ

ಅಧ್ಯಕ್ಷರು : ಪ್ರೊಸೀಜರ್ ಪ್ರಕಾರ ಫಾಲೋ ಮಾಡಿಯೆಂದು ನೀವೇ ಹೇಳಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ತಾವೇ ಹೇಳಿದ್ದೀರಿ ಅವರನ್ನು ಕರೆಯಿರಿಯೆಂದು, 7ನೇ ತಾರೀಖು ಏನೇನು ತೆಗೆದುಕೊಳ್ಳಬೇಕೆಂದು ಒಂದು ಲೆಕ್ಕ ಹಾಕಬೇಕು. ಡಿಮಾಂಡ್ ಡಿಸ್‌ಕಷನ್ ಬಗ್ಗೆ ನಮ್ಮದು ವಿರೋಧವಿಲ್ಲ. ಸದನ ಎಕ್ಸ್‌ಟೆಂಡ್ ಆಗಿದ್ದರೆ ಪ್ರಶ್ನೆ ಬೇರೆ ಇತ್ತು ನಾಳೆ ಅಧಿವೇಶನ ನಡೆಯುವುದಿಲ್ಲ. ಇದು ಮಹತ್ವವಾದ ವಿಷಯವಿದೆ. ನೀವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಹೋಮ್‌ಮಿನಿಸ್ಟರ್ ಬಂದಿದ್ದಾರೆ. ತೊಂದರೆಯೇನೂ ಆಗುವುದಿಲ್ಲ. ಅದರ ಬಗ್ಗೆ ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಲಘುವೆ ಮುಗಿಸುತ್ತೇನೆ. ಡಿಮಾಂಡ್ ಪಾಸ್ ಮಾಡುವುದಕ್ಕೆ ನಾವು ಸಹಕಾರ ನೀಡುತ್ತೇವೆ. ಡಿಮಾಂಡ್ ಪಾಸ್ ಮಾಡಲಿಕ್ಕೆ ಎಷ್ಟು ಗಂಟೆ ಬೇಕಾದರೂ ಕೊಡಿ. 27ನೇ ತಾರೀಖು ನೋಟೀಸನ್ನು ತಮ್ಮ ಕಛೇರಿಗೆ ಕಳುಹಿಸಿದ್ದೇನೆ. ಅದರ ಅಕ್‌ನಾಲೆಡ್ಜ್‌ಮೆಂಟ್ ಇದೆ. ಅದರ ಪ್ರತಿಯನ್ನು ಗೃಹಮಂತ್ರಿಗಳ ಕಛೇರಿಗೂ ಕಳುಹಿಸಿದ್ದೇನೆ. ಗೃಹಮಂತ್ರಿಗಳು ಅಕ್ನೊಸ್ಡ್‌ನಂ.1 ಮತ್ತು 5 ಅವರ ಜೊತೆಯಲ್ಲಿ 13ನೇ ತಾರೀಖು ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಅದರ ಫೋಟೋ ಇದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ವಿರೋಧಪಕ್ಷದ ನಾಯಕರು ಇರುವಾಗ ಅವರ ಜೊತೆಯಲ್ಲಿ ಅನೇಕ ಜನರು ಇರುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ : ಅಂತಹವರ ಜೊತೆಯಲ್ಲಿದ್ದ ಫೋಟೋವನ್ನು ನಾನು ತೋರಿಸುತ್ತೇನೆ. ಮಾನ್ಯ ಶರದ್‌ಪವಾರ್‌ರವರು ಕೇಂದ್ರದಲ್ಲಿ ರಕ್ಷಣಾ ಸಚಿವರಾಗಿದ್ದಾಗ ಲಕ್ನೋದಿಂದ ಬಾಂಬೆಗೆ ಬರುವಾಗ ಸ್ಪೆಷಲ್ ಏರ್‌ಕ್ರಾಫ್ಟ್‌ನಲ್ಲಿ ಕೆಲವು antisocial ಜನ ಇದ್ದರು ಅಂದಾಗ ಅವರು, he admitted....

SRI M. Veerappa Moily : I don't think it can go on record.

SRI Harnalli Ramaswamy: It should not go into the record.

SRI K.H. Ranganath : It should not be raised here.

ಶ್ರೀ ಆರ್.ವಿ. ದೇಶಪಾಂಡೆ : ಲೋಪವಿದೆಯೆಂದು ಹೇಳುವಾಗ, ಹೌದು ನನಗೆ ಗೊತ್ತಾಗಲಿಲ್ಲ ಯಾರೋ ನನ್ನ ಸ್ನೇಹಿತರು ಮತ್ತು ಅವರು ಕುಳಿತುಕೊಂಡು ಬಂದರು ಅಂದರು. ನಾನು ಅವರ ಪರವಾಗಿ ಮಾತನಾಡುತ್ತಿದ್ದೇನೆ, ಅವರು ತಪ್ಪು ತಿಳಿದುಕೊಂಡಿದ್ದಾರೆ. When it was brought to his notice, he admitted and he said, I am sorry. ಶರತ್ ಪವಾರ್‌ರವರು ನನಗೆ ಗೊತ್ತಾಗಲಿಲ್ಲವೆಂದು ಹೇಳಿದರು. ರಕ್ಷಣಾ ಸಚಿವರು ಒಪ್ಪಿಕೊಂಡರು ನಿಜ ಕೆಲವು ಸಂದರ್ಭಗಳಲ್ಲಿ ಬರುತ್ತಾರೆ, ಸ್ನೇಹಿತರ ಜೊತೆಯಲ್ಲಿ ಬಂದರು ಎಂದು ಅವರು ಒಪ್ಪಿಕೊಂಡಿದ್ದಾರೆ. ಯಾರು ಅಧಿಕಾರದಲ್ಲಿರುತ್ತಾರೆ ಯಾರು ಸ್ಥಾನಮಾನ ಪಡೆದುಕೊಂಡಿದ್ದಾರೆ ಅವರ ಮೇಲೆ ಜವಾಬ್ದಾರಿಗಳು ಇರುತ್ತವೆ. ನಾನು ಅವರ ವಿರುದ್ಧ ಮಾತನಾಡುತ್ತಿಲ್ಲ. ಈಗಾಗಲೇ ನಾವು ಮತ್ತು ನಮ್ಮ ಪಕ್ಷದ ಸದಸ್ಯರು ಬೇರೆ ಪಕ್ಷದವರು .....

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಅಜೆಂಡಾ ಪ್ರಕಾರ ಇದೆಯೆ?

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ : ಸೋಮಕ್ಕನ ಹಳ್ಳಿಯಲ್ಲಿ ಜನತಾದಳದ ಕಾರ್ಯಕರ್ತನ ಕೊಲೆ.

* ಶ್ರೀ ಆರ್.ವಿ. ದೇಶಪಾಂಡೆ : ನಾನು ಈ ವಿಚಾರವನ್ನು ರೈಸ್ ಮಾಡಿದಾಗ ಹೋಮ್ ಮಿನಿಷ್ಟರ್‌ರವರನ್ನು ಕರೆಯುವುದಕ್ಕೆ ಅಧ್ಯಕ್ಷರು ಕಳುಹಿಸಿದ್ದಾರೆ. ನಿಯಮ 351ರ ಪ್ರಕಾರ ತಮ್ಮ ಕಛೇರಿಗೆ ಒಂದು ನೋಟೀಸ್ ಕಳುಹಿಸಿದ್ದೇನೆ. ಅದರ ಪ್ರತಿಯನ್ನು ಗೃಹಸಚಿವರ ಕಛೇರಿಗೂ ಕಳುಹಿಸಿದ್ದೇನೆ. ದಿನಾಂಕ 11-6-94ರಂದು ಸೋಮಕ್ಕನಹಳ್ಳಿ ಗ್ರಾಮದಲ್ಲಿ ನಮ್ಮ ಜನತಾದಳದ ಒಬ್ಬ ಕಾರ್ಯಕರ್ತರ ಕೊಲೆಯಾಯಿತು ಆ ಸಮಯದಲ್ಲಿ ಕೊಲೆ ಆದಾಗ ಸಿಪಿಐದವರು ಒಂದು ಸ್ಟೇಟ್‌ಮೆಂಟ್ ಮತ್ತು ರೆಕಾರ್ಡ್ ಮಾಡುವುದಕ್ಕೆ ಹೋದಾಗ ಬಹಳ ದೊಡ್ಡ ಗಲಾಟೆಯಾಗಿ ರಾಮರೆಡ್ಡಿಯವರ ದೇಹವನ್ನು ಪೋಸ್ಟ್‌ಮಾರ್ಟಮ್